ದಿನಾಂಕ : 15/09/2022
ಓ.ಎಸ್. : 96/2018
ಪಿ.ಡ ಬ್ಲ್ಯೂ: 1
ಸಾಕ್ಷಿ : ತುರಾಬ್ ಆಲಿ ಬೇಗ್

**ಸಾಕ್ಷಿಯನ್ನು ದಿನಾಂಕ:15/09/2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ವಿ.ಬಿ. ರವರಿಂದ:**

1. ಸಂತೆ ಮೈದಾನವನ್ನು ಸರ್ಕಾರಿ ದಾಖಲೆಗಳಲ್ಲಿ ಸರ್ಕಾರಿ ಜಾಗ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಸಂತೆ ಮೈದಾನ ಸಾರ್ವಜನಿಕ ಜಾಗ ಎಂದು ಸರ್ಕಾರಿ ದಾಖಲೆಗಳಲ್ಲಿ ನಮೂದಾಗಿದೆ. ಸಂತೆ ಮೈದಾನ ಸಾರ್ವಜನಿಕ ಸ್ಥಳ ಎಂಬ ಬಗ್ಗೆ ನಿಡಿಘಟ್ಟ ಪಂಚಾಯಿತಿಯ ಅಸೆಸ್‌ಮೆಂಟ್ ದಾಖಲಾತಿಯಲ್ಲಿ ನಮೂದಾಗಿರುತ್ತದೆ ಮತ್ತು ಅದಕ್ಕೆ ಸಂಬಂಧಿಸಿದಂತೆ ವಾರ್ಷಿಕ ಹರಾಜು ನಡೆಯುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಂತೆ ಮೈದಾನ 3 ಎಕರೆ 38 ಗುಂಟೆ ಇರುತ್ತದೆ. ಸದರಿ 3 ಎಕರೆ 38 ಗುಂಟೆಯಲ್ಲಿ ಸುಮಾರು 10-12 ಜನರು ಒತ್ತುವರಿ ಮಾಡಿರುತ್ತಾರೆ ಮತ್ತು ಈ ಬಗ್ಗೆ ಕೇಸ್ ನಡೆಯುತ್ತಿದೆ. ಸದರಿ 10-12 ಜನರ ಮೇಲೆ ಈ ದಾವೆ ತರಹ ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ನಾವು ಸಲ್ಲಿಸಿರುವುದಿಲ್ಲ ಬೇರೆಯವರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಕೇಸ್ ಹಾಕಿರುವವರ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ಕೇಸುಗಳು ಪುಟ್ಟಸ್ವಾಮಿ ಮತ್ತು ಮಹದೇವರವರ ಮೇಲೆ ಹಾಕಲಾಗಿತ್ತು ಎಂದು ನುಡಿಯುತ್ತಾರೆ. ಈ ತರಹ ಪ್ರಸ್ತುತ ದಾವೆಯನ್ನು ಹೊರತುಪಡಿಸಿ ಇನ್ನೊಂದು ಕೇಸ್ ಇರುತ್ತದೆ. ಇನ್ನೊಂದು ಕೇಸನ್ನು ಸುಮಾರು ಜನರು ಸಾರ್ವಜನಿಕರ ಪರವಾಗಿ ಹಾಕಿರುತ್ತಾರೆ. ಇನ್ನೊಂದು ದಾವೆಯ ವಾದಿಗಳ ಹೆಸರು ನನಗೆ ಗೊತ್ತಿಲ್ಲ. ಸದರಿ ಇನ್ನೊಂದು ದಾವೆಯು ಮದ್ದೂರಿನ ಪ್ರಧಾನ

ದಿನಾಂಕ : 15/09/2022
ಓ.ಎಸ್. : 96/2018
ಪಿ.ಡ ಬ್ಲ್ಯೂ: 1
ಸಾಕ್ಷಿ : ತುರಾಬ್ ಆಲಿ ಬೇಗ್

ಸಿವಿಲ್ ನ್ಯಾಯಾಲಯದಲ್ಲಿ ಹಾಕಲಾಗಿತ್ತು. ಸದರಿ ಇನ್ನೊಂದು ಕೇಸ್ ಬಾಕಿ ಇರುತ್ತದೆಯೋ ಅಥವಾ ಮುಕ್ತಾಯವಾಗಿರುತ್ತದೆಯೋ ನನಗೆ ಗೊತ್ತಿಲ್ಲ. ಇನ್ನೊಂದು ಕೇಸ್ ಇರುವ ಬಗ್ಗೆ ನಿಮಗೆ ಯಾರಿಂದ ಗೊತ್ತಾಗಿರುತ್ತದೆ ಎಂದರೆ ಸ್ಥಳಕ್ಕೆ ತಹಶೀಲ್ದಾರ್, ಡಿ.ಸಿ., ಕಂದಾಯ ನಿರೀಕ್ಷಕರು ಬಂದಾಗ ಅಲ್ಲಿ ಮಾತನಾಡುತ್ತಿದ್ದ ಕಾರಣ ನನಗೆ ಸದರಿ ಇನ್ನೊಂದು ಕೇಸಿನ ವಿಚಾರ ನನಗೆ ಗೊತ್ತಾಗಿರುತ್ತದೆ. ಸದರಿ ಅಧಿಕಾರಿಗಳು ಮಾತನಾಡಿಕೊಳ್ಳುತ್ತಿದ್ದ ಕಾರಣ ನನಗೆ ಇನ್ನೊಂದು ಕೇಸ್ ಇರುವ ವಿಚಾರ ನನಗೆ ಗೊತ್ತಾಗಿರುತ್ತದೆ. ನಾನು ಸದರಿ ಇನ್ನೊಂದು ಕೇಸಿನ ಸಂಖ್ಯೆ ಇತ್ಯಾದಿಯ ಬಗ್ಗೆ ಮಾಹಿತಿಯನ್ನು ಸದರಿ ಅಧಿಕಾರಿಗಳ ಬಳಿ ಕೇಳಿರುವುದಿಲ್ಲ. ಸದರಿ ಅಧಿಕಾರಿಗಳು ಸ್ಥಳಕ್ಕೆ ಬಂದು ಸುಮಾರು ಹತ್ತು ವರ್ಷಗಳಾಗಿರುತ್ತದೆ. ಪುಟ್ಟಸ್ವಾಮಿ ಮತ್ತು ಮಹದೇವ ಹಾಗೂ ಇನ್ನೂ ಕೆಲವರು ಒತ್ತುವರಿ ಮಾಡಿರುವ ವಿಚಾರದಲ್ಲಿ ಸದರಿ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು. ಆ ದಿನ ಸದರಿ ಅಧಿಕಾರಿಗಳು ಸ್ಥಳಕ್ಕೆ ಬರುವ ಮೊದಲೇ ಅಳತೆ ಸ್ಕೆಚ್ ಆಗಿದ್ದು ಆ ದಿನ ತೆರವುಗೊಳಿಸಲು ಸದರಿ ಅಧಿಕಾರಿಗಳು ಬಂದಿದ್ದರು. ಸದರಿ ಅಳತೆ ಸ್ಕೆಚ್ ದಾಖಲಾತಿಗಳನ್ನು ನಾನು ಪಡೆದುಕೊಂಡಿರುವುದಿಲ್ಲ. ಸದರಿ ಅಳತೆ ಸ್ಕೆಚ್ ದಾಖಲಾತಿಗಳಲ್ಲಿ ಪ್ರಸ್ತುತ ಪ್ರತಿವಾದಿಗಳು ಒತ್ತುವರಿ ಮಾಡಿರುವ ಬಗ್ಗೆ ಉಲ್ಲೇಖ ಇರುತ್ತದೆ. ಸದರಿ ಸರ್ವೆ ಸ್ಕೆಚ್ ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಆ ದಿನ ಸದರಿ ಅಧಿಕಾರಿಗಳು ಜೆ.ಸಿ.ಬಿ.ಯೊಂದಿಗೆ ಒತ್ತುವರಿ ತೆರವು ಮಾಡಲು ಬಂದಿದ್ದರು ಆದರೆ ರಾಜಕಾರಣಿಗಳ ಒತ್ತಡದಿಂದ ತೆರವು ಮಾಡದೇ ಹಾಗೆ ಹೋಗಿರುತ್ತಾರೆ. ಆ ಸಮಯದಲ್ಲಿ ಪ್ರಸ್ತುತ ಪ್ರತಿವಾದಿಗಳನ್ನು ತೆರವುಗೊಳಿಸಲು ಸದರಿ ಅಧಿಕಾರಿಗಳು ಪ್ರಯತ್ನ ಮಾಡಿರುತ್ತಾರಾ

ದಿನಾಂಕ : 15/09/2022
ಓ.ಎಸ್. : 96/2018
ಪಿ.ಡ ಬ್ಲ್ಯೂ: 1
ಸಾಕ್ಷಿ : ತುರಾಬ್ ಆಲಿ ಬೇಗ್

ಎಂಬ ಪ್ರಶ್ನೆಗೆ ಸಾಕ್ಷಿ ಆ ಸಮಯದಲ್ಲಿ ಪ್ರಸ್ತುತ ಪ್ರತಿವಾದಿಗಳು ಇನ್ನೂ ಕೈ ಹಾಕಿರಲಿಲ್ಲ ಮತ್ತು ಸಂತೆ ಮೈದಾನವನ್ನು ಒತ್ತುವರಿ ಮಾಡಿರಲಿಲ್ಲ ಎಂದು ನುಡಿಯುತ್ತಾರೆ.

2. ಪ್ರಸ್ತುತ ಪ್ರತಿವಾದಿಗಳು ಸುಮಾರು ಮೂರು ವರ್ಷಗಳ ಹಿಂದೆ ಸಂತೆ ಮೈದಾನವನ್ನು ಒತ್ತುವರಿ ಮಾಡಿರುತ್ತಾರೆ. ಪ್ರತಿವಾದಿಗಳಿಂದ ಒತ್ತುವರಿ ಆದ ನಂತರ ಸದರಿ ಸಂತೆ ಮೈದಾನಿನ ಅಳತೆ ಆಗಿರುವುದಿಲ್ಲ. ಸದರಿ ಸಂತೆ ಮೈದಾನಿನಲ್ಲಿ ಪ್ರತಿವಾದಿಗಳಿಂದ ಒತ್ತುವರಿ ಆಗಿರುತ್ತದೆಯೋ ಇಲ್ಲವೋ ಎಂಬ ಬಗ್ಗೆ ತಿಳಿದುಕೊಳ್ಳುವ ಸಲುವಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಲು ನನ್ನ ಆಕ್ಷೇಪಣೆ ಇರುವುದಿಲ್ಲ. ಸದರಿ ಸಂತೆ ಮೈದಾನದಲ್ಲಿ ಯಾರು ಯಾರು ಎಷ್ಟೆಷ್ಟು ಒತ್ತುವರಿ ಮಾಡಿರುತ್ತಾರೆ ಎಂದು ತಿಳಿದುಕೊಳ್ಳಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡುವ ಬಗ್ಗೆ ನನಗೆ ಆಕ್ಷೇಪಣೆ ಇರುವುದಿಲ್ಲ. ಈ ತರಹ ದಾವೆಯನ್ನು ಒತ್ತುವರಿ ಮಾಡಿದ ಬೇರೆ ಜನರ ಮೇಲೆ ಹಾಕಲು ತೊಂದರೆ ಇರಲಿಲ್ಲ ಎಂದರೆ ಅವರ ಮೇಲೆ ಆಗಲೇ ದಾವೆ ಹಾಕಲಾಗಿದ್ದ ಕಾರಣ ನಾವು ದಾವೆಯನ್ನು ಸಲ್ಲಿಸಿರುವುದಿಲ್ಲ. ಸದರಿ ಬೇರೆ ಜನರ ಮೇಲೆ ದಾವೆಯನ್ನು ಹತ್ತು ವರ್ಷಗಳ ಹಿಂದೆಯೇ ಹಾಕಲಾಗಿತ್ತು. ಸದರಿ ಇನ್ನೊಂದು ದಾವೆಯನ್ನು 3-4 ಜನ ವ್ಯಕ್ತಿಗಳು ಹಾಕಿರುತ್ತಾರೆ. ಸದರಿ ಇನ್ನೊಂದು ದಾವೆಯನ್ನು ಪುಟ್ಟಸ್ವಾಮಿ ಎಂಬ ವ್ಯಕ್ತಿಯ ಮೇಲೆ ಹಾಕಲಾಗಿತ್ತು. ಉಳಿದವರ ಮೇಲೆ ಕೇಸ್ ಹಾಕಿರುತ್ತಾರೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ವಾದಿ ಸುಮಾರು ಒಂದು ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

ದಿನಾಂಕ : 15/09/2022
ಓ.ಎಸ್. : 96/2018
ಪಿ.ಡ ಬ್ಲ್ಯೂ: 1
ಸಾಕ್ಷಿ : ತುರಾಬ್ ಆಲಿ ಬೇಗ್

**ಶ್ರೀಹೆಚ್.ವಿ.ಬಿ. ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.